ಕೃತಿಯೊಂದನ್ನು ವಿಮರ್ಶೆಗೆ ಎತ್ತಿಕೊಳ್ಳಲು ಪ್ರೇರೇಪಿಸಬಹುದು. ಅಥವ ಕೃತಿಯ ಸ್ವಪ್ರಕಾಶವೇ ವಿಮರ್ಶಕನನ್ನು ತನ್ನತ್ತ ಆಕರ್ಷಿಸಬಹುದು. ಇನ್ನು ವಿಮರ್ಶಕರ ನಿರ್ಲಕ್ಷ್ಯಕ್ಕೊಳಗಾದ ಕೃತಿಗಳೂ ನಮ್ಮಲ್ಲಿ ಸಾಕಷ್ಟಿವೆ. ಆಗಲೇ ಹೇಳಿದಂತೆ ಅದರ ಕುರಿತು ಹಳಹಳಿಕೆಯ ಆವಶ್ಯಕತೆಯಿಲ್ಲ.

5 ಅಗತ್ಯಕ್ಕಿಂತ ಹೆಚ್ಚಾಗಿ ಕೃತಿಯೊಂದಕ್ಕೆ ವಿಮರ್ಶೆ ಎಂಬ ಹೆಸರಿನಡಿ ಹೊಗಳಿಕೆಗಳು ಜಾಸ್ತಿ ಸಿಕ್ಕಾಗ ಬರಹಗಾರ ಮತ್ತು ಅವನ ಸಾಹಿತ್ಯ ಕೊಂಚ ಹಾದಿತಪ್ಪುವ ಅಪಾಯವಿರುತ್ತದೆ. ಪ್ರಶಸ್ತಿಪ್ರೇರಿತ ವಿಮರ್ಶೆಗಳು ಇಂಥ ದುರಂತಗಳನ್ನು ಹುಟ್ಟುಹಾಕಬಲ್ಲವು. ಇದರಿಂದ ಉತ್ತೇಜನಗೊಂಡ ಕವಿಯೊಬ್ಬ ತಾನೇ ಅಗ್ರಗಣ್ಯ ಎಂದುಕೊಳ್ಳುವುದು, ಸಮಕಾಲೀನ ಲೇಖಕರಲ್ಲಿ ತಾನೇ ಪ್ರಮುಖ ಅಥವಾ ಪ್ರಥಮ ಎಂದುಕೊಳ್ಳುವುದು ಇವೇ ಮುಂತಾದ ಭ್ರಮೆಗಳನ್ನು ಹುಟ್ಟಿಸಿ ಬರಹಗಾರನ ಪ್ರಾಮಾಣಿಕತೆಯನ್ನು ಕಸಿದುಕೊಳ್ಳುವಲ್ಲಿ ಸಫಲವಾಗಬಲ್ಲವು. ಇಂತಹ ಕೆಲವು ಉದಾಹರಣೆಗಳನ್ನು ನೋಡಿದ್ದೇನೆ. ಇನ್ನು ವಿಮರ್ಶೆ ಬಂದಬಳಿಕ ತಮ್ಮ ಸ್ವಂತ ಅಭಿವ್ಯಕ್ತಿಯನ್ನು ಮರೆತು ಓದುಗರನ್ನು, ವಿಮರ್ಶಕರನ್ನು ಚಕಿತಗೊಳಿಸುವಂತೆ ಬರೆಯಲು ಹೆಣಗಾಡುವವರೂ ಕಮ್ಮಿಯಿಲ್ಲ. ವಿಮರ್ಶೆಯಿಂದ ಒಂದಿಷ್ಟು ವಸ್ತುನಿಷ್ಠ ವಿಶ್ಲೇಷಣೆ, ಸಕಾರಾತ್ಮಕ ಕೆಲ ಅಂಶ ಮತ್ತು ಮಾರ್ಗದರ್ಶನದ ಒಂದಿಷ್ಟು ಹಿತನುಡಿಗಳನ್ನು ಹೊಸಬರಹಗಾರ ಅಪೇಕ್ಷಿಸುವುದು ಸಹಜ. ಆದರೆ ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡವನು ಬೆಳೆಯುತ್ತಾನೆ. ಇಂದಿಗೂ ವಿಮರ್ಶೆ ಎಂಬುದು ಮಾರ್ಗದರ್ಶನ ಎಂದು ಕೆಲವರಾದರೂ ತಿಳಿದುಕೊಂಡಿದ್ದಾರೆಂದರೆ ಅಂಥವರಿಂದಲೇ ಇನ್ನಷ್ಟು ಉತ್ತಮ ಸಾಹಿತ್ಯ ನಿರೀಕ್ಷೆ ಸಾಧ್ಯ.

6 ನಾವು ಕತ್ತಲೆಯಲ್ಲಿ ಮೂರ್ತಿಯೊಂದನ್ನು ತಯಾರಿಸಿದ್ದೇವೆ, ಅದನ್ನು ತೋರಿಸಲು ದೀಪವೊಂದು ಇಲ್ಲದಿದ್ದರೆ ಏನಾಗುತ್ತದೆ? ತಿದ್ದಿ ಬುದ್ಧಿ ಹೇಳುವ ಹಿರಿಯ ಜೀವವೊಂದು ಮನೆಯಲ್ಲಿ ಇಲ್ಲದಿದ್ದರೆ ಏನಾಗುತ್ತದೆ? ಕಿಂವ್‌ಗುಡುವ ವಾಹನ ದಟ್ಟಣೆಯಲ್ಲಿ ಟ್ರಾಫಿಕ್ ಪೊಲೀಸ್ ಒಬ್ಬ ಇಲ್ಲದಿದ್ದರೆ ಏನಾಗುತ್ತದೆ? ಹೀಗೆ ಇಲ್ಲದಿದ್ದರೆ ಏನೆಲ್ಲ ಆಗಬಹುದು ಅಥವಾ ಏನೂ ಆಗದಿರಬಹುದು. ವಿಮರ್ಶೆಯೇ ಇಲ್ಲದಿದ್ದರೆ ಬರಿಯ ಬರಹ ಬರಹವೇ ಆಗಿ ಉಳಿದುಬಿಡಬಹುದು, ಇಲ್ಲವೆ ಉತ್ತಮ ಸಾಹಿತ್ಯವೂ ಆಗಬಹುದು. ಕತ್ತಲೆಯಲ್ಲಿ ನಡೆಯುವವನಿಗೆ ವಿಮರ್ಶೆಯೊಂದು ಮಿನುಗುದೀಪ; ದಾರಿ ಕೊಂಚ ಸ್ಪಷ್ಟವಾಗುವುದು.

7 ನನ್ನ ಅಭಿವ್ಯಕ್ತಿಯ ಮಾಧ್ಯಮವಾಗಿ ಸಾಹಿತ್ಯವನ್ನು ನೆಚ್ಚಿದ್ದೇನೆ. ಓದುಗನನ್ನೋ, ವಿಮರ್ಶಕನನ್ನೋ ದೃಷ್ಟಿಯಲ್ಲಿಟ್ಟುಕೊಂಡು ಬರೆದರೆ ನನ್ನ ಅಭಿವ್ಯಕ್ತಿ ಹಾದಿ ತಪ್ಪುತ್ತದೆ. ಪ್ರಾಮಾಣಿಕವಾದ ಸಾಹಿತ್ಯಕ್ಕೆ ತಕ್ಕಂತೆ ಓದುಗ, ವಿಮರ್ಶಕ ಸಿಕ್ಕೇ ಸಿಗುತ್ತಾರೆ. ಇದು ನನ್ನ ಬಲವಾದ ನಂಬಿಕೆ.

**ಆನಂದ ಕುಂಚನೂರ**

ಬನಹಟ್ಟಿಯವರಾದ ಲೇಖಕರು ಎಂ. ಫಾರ್ಮಸಿ ಮುಗಿಸಿ ಪ್ರಸ್ತುತ ಬೆಂಗಳೂರಿನ ಔಷಧಿ ಕಂಪನಿಯೊಂದರಲ್ಲಿ ಹಿರಿಯ ವಿಜ್ಞಾನಿಯಾಗಿದ್ದಾರೆ. ಪ್ರಕಟಿತ ಕವನ ಸಂಕಲನಗಳು: 'ಕರಿನೆಲ' ಮತ್ತು 'ವ್ಯೋಮ ತಂಬೂರಿ ನಾದ', ಕಥಾಸಂಕಲನ: 'ಪಾದಗಟ್ಟಿ'.